ಕ್ರಮ ಸಂಖ್ಯೆ	ಜಿಲ್ಲೆಯ ಹೆಸರು	ನಿವೇಶನ ಕೋರಿ ಬಂದಿರುವ ಅರ್ಜಿ ಸಂಖ್ಯೆ
16	ಹಾಸನ	773
17	ಹಾವೇರಿ	405
18	ಕೊಡಗು	430
19	ಕೋಲಾರ	980
20	ಕೊಪ್ಪಳ	1860
21	ಮಂಡ್ಯ	1860
22	ಮೈಸೂರು	1345
23	ರಾಯಚೂರು	125
24	ಶಿವಮೊಗ್ಗ	305
25	ತುಮಕೂರು	368
26	ಉಡುಪಿ	94
27	ಉತ್ತರ ಕನ್ನಡ	496
	ಒಟ್ಟು	28353

ನರ್ಸಿಂಗ್ ಹೋಂ ಸ್ಥಾಪನೆಗೆ ಪರವಾನಗಿ

328 (492) ಶ್ರೀ ಸದಾನಂದ ಗೌಡ ಡಿ.ವಿ. (ಪುತ್ತೂರು) - ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಖಾಸಗಿ ಆಸ್ಪತ್ರೆ, ಕ್ಲಿನಿಕ್, ನರ್ಸಿಂಗ್ ಹೋಂ ಸ್ಥಾಪಿಸಲು ಇರುವ ನಿಯಮ ಮತ್ತು ಮಾನದಂಡಗಳೇನು ;

ಆ) ಈ ನಿಯಮಗಳನ್ನು ಅನುಸರಿಸಲಾಗುತ್ತಿದೆಯೇ ;

ಇ) ಇವುಗಳನ್ನು ಪ್ರಾರಂಭಿಸಲು ಸರ್ಕಾರದ ಅನುಮತಿ ಅಗತ್ಯವೇ ; ಇದನ್ನು ಕಡ್ಡಾಯಗೊಳಿಸಲು ಕಾಯಿದೆ ರೂಪಿಸಲಾಗಿದೆಯೇ ;

ಈ) ಸರ್ಕಾರ ಪರವಾನಗಿ ನೀಡಲು ಅನುಸರಿಸುವ ಕ್ರಮಗಳೇನು ;

ಉ) ಈ ನಿಟ್ಟಿನಲ್ಲಿ ಗುಣಮಟ್ಟ ಮಾನ್ಯತಾ ಸಮಿತಿ ರಚಿಸಲಾಗುವುದೇ ;

ಊ) ಯಾವಾಗಿನಿಂದ ಈ ಕ್ರಮ ಜಾರಿಯಾಗುವುದು ; (ವಿವರ ಒದಗಿಸಿ) ?

ಶ್ರೀ ಕಾಗೋಡು ತಿಮ್ಮಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ಖಾಸಗಿ ಆಸ್ಪತ್ರೆಗಳು, ನರ್ಸಿಂಗ್ ಹೋಂ ನಿಯಮಗಳು 1976 ರಲ್ಲಿರುವ ಅನುಸೂಚಿ 1 ಮತ್ತು 2 ರಲ್ಲಿರುವ ಮಾನದಂಡಕ್ಕೆ ಅನುಗುಣವಾಗಿ ನರ್ಸಿಂಗ್ ಹೋಂಗಳು ಇರಬೇಕಾಗಿರುತ್ತದೆ ಆದರೆ ನಿಯಮಗಳು ಜಾರಿ ಆಗಿರುವುದಿಲ್ಲ.

ಆ) ಇಲ್ಲ

ಇ) ಪ್ರಸ್ತುತದಲ್ಲಿ ಈ ಕಾಯಿದೆ ಜಾರಿಯಲ್ಲಿ ಇಲ್ಲದೆ ಇರುವುದರಿಂದ ಅನುಮತಿ ಪಡೆಯಲಾಗುತ್ತಿಲ್ಲ.

ಈ) ಉದ್ಭವಿಸುವುದಿಲ್ಲ

ಊ) ಉದ್ಭವಿಸುವುದಿಲ್ಲ

ಋ) ಉದ್ಭವಿಸುವುದಿಲ್ಲ.

ಆಶ್ರಯ ನಿವೇಶನ ಹಂಚಿಕೆ

329 (493) ಶ್ರೀ ಸದಾನಂದ ಗೌಡ ಡಿ.ವಿ. (ಪುತ್ತೂರು) - ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಆಶ್ರಯ ನಿವೇಶನ ಯೋಜನೆಯಡಿಯಲ್ಲಿ ಈ ತನಕ ರಾಜ್ಯದಲ್ಲಿ ವಿತರಿಸಲಾದ ಒಟ್ಟು ನಿವೇಶನಗಳ ಸಂಖ್ಯೆ ಎಷ್ಟು ;

ಆ) ಈ ಪೈಕಿ ನಿವೇಶನ ಖರೀದಿಗಾಗಿ ಸರ್ಕಾರವು ವ್ಯಯಿಸಿದ ಮೊತ್ತವೆಷ್ಟು ;

ಇ) ಆಶ್ರಯ ಮನೆ ಮಂಜೂರಾತಿಗಾಗಿ ರಾಜ್ಯದಲ್ಲಿ ಪ್ರಸ್ತುತ ಬೇಡಿಕೆ ಇರುವ ಫಲಾನುಭವಿಗಳ ಸಂಖ್ಯೆ ಎಷ್ಟು ; ಈತನಕದ ಫಲಾನುಭವಿಗಳ ಬೇಡಿಕೆಯನ್ನು ಯಾವಾಗ ಪೂರೈಸಲಾಗುವುದು ; (ವಿವರ ನೀಡುವುದು) ?

ಶ್ರೀ ಸಿ.ಆರ್. ಸಗೀರ್ ಅಹಮದ್ (ವಸತಿ ಸಚಿವರು)

ಅ) ಆಶ್ರಯ ನಿವೇಶನ ಯೋಜನೆಯಡಿಯಲ್ಲಿ 2000-01 ರಿಂದ 31.01.2003 ರವರೆಗೆ ವಿತರಿಸಲಾದ ನಿವೇಶನಗಳ ಸಂಖ್ಯೆ ಮತ್ತು ನಿವೇಶನ ಖರೀದಿಗಾಗಿ ನಿಗಮವು ವ್ಯಯಿಸಿದ ಮೊತ್ತ ಈ ಕೆಳಗಿನಂತಿದೆ

ಯೋಜನೆ	ವರ್ಷ	ವಿತರಿಸಲಾದ ನಿವೇಶನಗಳ ಸಂಖ್ಯೆ	ನಿವೇಶನ ಖರೀದಿಗಾಗಿ ನಿಗಮವು ವ್ಯಯಿಸಿದ ಮೊತ್ತ (ರೂ.ಲಕ್ಷಗಳಲ್ಲಿ)
ನಗರ ಆಶ್ರಯ	2000-01	13039	420.75
ನಿವೇಶನ	2001-02	8525	637.27
	2002-03 31-01-2003ವರೆಗೆ	678	573.32
	ಒಟ್ಟು	**22242**	**1631.34**
ಗ್ರಾಮೀಣ	2000-01	9113	260.00
ಆಶ್ರಯ	2001-02	19784	81.20
ನಿವೇಶನ	2002-03 (31.01-03 ರವರೆಗೆ)	18253	414.32
	ಒಟ್ಟು	**47150**	**755.52**

ಇ) 1999 ರಿಂದ 2004 ರವರೆಗೆ ವಸತಿರಹಿತ ಫಲಾನುಭವಿಗಳ ಬೇಡಿಕೆ ಆಧಾರದ ಮೇಲೆ 11 ಲಕ್ಷ ಮನೆಗಳನ್ನು ನಿರ್ಮಿಸಲು ಕಾರ್ಯಕ್ರಮ ಹಮ್ಮಿಕೊಂಡಿದೆ.

ಶಾಲಾ ಮಕ್ಕಳಿಗೆ ಮಧ್ಯಾಹ್ನದ ಬಿಸಿಯೂಟ

330 (265) ಶ್ರೀ ಶಂಕರಲಿಂಗೇಗೌಡ ಹೆಚ್.ಎಸ್. (ಚಾಮರಾಜ) - ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?